ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	೯೦
ಸದಸ್ಯರ ಹೆಸರು	:	ಶ್ರೀ ಎಸ್.ಎಸ್.ಬೋಸ್‌ರಾಜು
ಉತ್ತರಿಸುವ ದಿನಾಂಕ	:	15/07/2019
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	2013 ರಿಂದ ಇಲ್ಲಿಯವರೆಗೂ ಮಂಜೂರಾಗಿರುವ ವಿವಿಧ ವಸತಿ ಶಾಲೆಗಳ ಸಂಖ್ಯೆ ಎಷ್ಟು; 2013 ರಿಂದ ಇಲ್ಲಿಯವರೆಗೂ ಸ್ವಂತ ಕಟ್ಟಡಗಳನ್ನು ನಿರ್ಮಾಣ ಮಾಡಲು ಮಂಜೂರಾಗಿರುವ ಅನುದಾನ ಎಷ್ಟು;	2013-14ನೇ ಸಾಲಿನಿಂದ ಇಲ್ಲಿಯವರೆವಿಗೂ 302 ಹೊಸ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿದೆ. ಸ್ವಂತ ಕಟ್ಟಡ ನಿರ್ಮಾಣ ಮಾಡಲು ಮಂಜೂರು ಮಾಡಲಾಗಿರುವ ಅನುದಾನಥನ ವಿವರಗಳನ್ನು ಅನುಬಂಧಥಲ್ಲಿ ನೀಡಲಾಗಿದೆ.
(ಆ)	ಈ ಎಲ್ಲಾ ವಸತಿ ಶಾಲೆಗಳಲ್ಲಿ ಪ್ರವೇಶಾತಿಗಳ ಸಂಖ್ಯೆ ಎಷ್ಟು;	ಸಮಾಜ ಕಲ್ಯಾಣ ಇಲಾಖಾ ವತಿಯಿಂದ ನಡೆಸುತ್ತಿರುವ 68 ವಸತಿ ಶಾಲೆಗಳಲ್ಲಿ 6430 ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ 119 ಆಶ್ರಮ ಶಾಲೆಗಳಲ್ಲಿ 10,381 ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆಗಳಲ್ಲಿ 45,300 ವಿದ್ಯಾರ್ಥಿಗಳು ಪ್ರವೇಶ ಪಡೆದಿರುತ್ತಾರೆ.
(ಇ)	ರಾಯಚೂರು ಜಿಲ್ಲೆಯಲ್ಲಿ ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಉದ್ದೇಶಿಸಿರುವ ವಸತಿ ಶಾಲೆಗಳ ಸಂಖ್ಯೆ ಎಷ್ಟು;	ಸಮಾಜ ಕಲ್ಯಾಣ ಇಲಾಖೆಯ 01 ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ 02 ಆಶ್ರಮ ಶಾಲೆಗಳು ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 09 ವಸತಿ ಶಾಲೆಯ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಕ್ರಮವಹಿಸಲಾಗಿದೆ.
(ಈ)	ರಾಯಚೂರು ಜಿಲ್ಲೆಯಲ್ಲಿ ಇರುವ ವಿವಿಧ ವಸತಿ ನಿಲಯಗಳು ಎಷ್ಟು; ಸದರಿ ವಸತಿ ನಿಲಯಗಳಲ್ಲಿ ಪ್ರವೇಶಾತಿ ಹೊಂದಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಹಾಗೂ ಸದರಿ ವಸತಿ ನಿಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಾರ್ಡನ್‌ಗಳ ಸಂಖ್ಯೆ ಎಷ್ಟು?	ರಾಯಚೂರು ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ 73 ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ 20 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ 13,021 ವಿದ್ಯಾರ್ಥಿಗಳು ಪ್ರವೇಶ ಪಡೆದಿರುತ್ತಾರೆ. ಈ ವಿದ್ಯಾರ್ಥಿನಿಲಯಗಳಲ್ಲಿ 68 ವಾರ್ಡನ್ ಗಳು ಕಾರ್ಯನಿರ್ವಹಿಸುತ್ತಿದ್ದಾರೆ.

ಸಕಇ 151 ಪಕವಿ 2019

(ಪ್ರಿಯಾಂಕ್ ಖರ್ಗೆ)
ಸಮಾಜ ಕಲ್ಯಾಣ ಸಚಿವರು

ANNEXURE-I (LCQ (90) 11)

ಕಳೆದ 2013-2014 to 2018-19 ವರ್ಷಗಳಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ಬಿಡುಗಡೆಯಾದ ಮತ್ತು ಖರ್ಚಾದ ಅನುದಾನದ ವಿವರಗಳು

ರೂ. ಲಕ್ಷಗಳಲ್ಲಿ

ಕ್ರ.ಸಂ.	ವರ್ಷ	ವಸತಿ ಶಾಲಾ ಸಂಕೀರ್ಣಗಳ ನಿರ್ಮಾಣ				
		ಪ್ರಾರಂಭಿಕ ಶಿಲ್ಕು	ನಿಗಧಿಯಾದ ಅನುದಾನ	ಬಿಡುಗಡೆ	ಖರ್ಚಾದ ಅನುದಾನ	ಮಾರ್ಚ್ ಅಂತ್ಯಕ್ಕೆ ಉಳಿಕೆ
1	**ಸಮಾಜ ಕಲ್ಯಾಣ ಇಲಾಖೆ**					
	2013–14	0.00	14810.00	14810.00	13688.75	1121.25
	2014–15	1121.25	35038.89	35038.89	21609.29	14550.85
	2015–16	14550.85	38344.00	38344.00	18260.97	34633.88
	2016-17	34633.88	40375.00	40375.00	32659.47	42349.41
	2017-18	42349.41	23000.00	23000.00	51217.06	14132.35
	2018-19	14132.35	100126.00	100126.00	69738.71	44519.64
2	**ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ**					
	2013–14	4355.27	6400.00	6400.00	6284.12	4471.15
	2014–15	4471.15	19352.00	19352.00	6119.18	17703.97
	2015–16	17703.97	3400.00	3400.00	15026.07	6077.90
	2016-17	6077.90	10777.50	10777.50	9431.63	7423.77
	2017-18	7423.77	9274.68	9274.68	11694.07	5004.38
	2018-19	5004.38	26234.00	26244.00	19963.72	11284.66
	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ					
	2013–14	1334.63	3395.55	3395.55	4730.18	0.00
	2014–15	0.00	7908.76	7908.76	7908.76	0.00
	2015–16	0.00	4900.00	6087.75	5962.29	125.46
	2016-17	125.46	13746.00	13746.00	10650.44	3221.02
	2017-18	3221.02	15919.00	15919.00	13487.30	5652.72
	2018-19	5652.72	9870.00	11273.00	16647.66	278.06